ಖೂ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಯಮ 286ರ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಹಾಗೂ ಅನುಸೂಚಿತ ವರ್ಗಗಳ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸಬೇಕು.

ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಮಯ 288ರ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸಬೇಕು.

ಏ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 370 (2)ರ ಅನುಸಾರವಾಗಿ ಈ ಸಭೆ ವಸತಿ ಸೌಕರ್ಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಆಲಮಟ್ಟಿ ಡ್ಯಾಂ ಕುರಿತು

ಅಧ್ಯಕ್ಷರು : ಈಗ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಕೆಲವರೆಲ್ಲ ಮನವಿಯನ್ನು ಕೊಟ್ಟಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀಮಾನ್ ನಂಜೇಗೌಡರು, ಮತ್ತು ಇತರರೆಲ್ಲರು ಆಲಮಟ್ಟಿ ವಿಚಾರದಲ್ಲಿ ಈ ಸಭೆಯ ಗಮನ ಸೆಳೆಯುವುದಕ್ಕೆ ತಕ್ಷಣ ನಾವು ಇದನ್ನು ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಮ್ಮ ನಿಯಮಾವಳಿಯ ಪ್ರಕಾರ ನಿಲುವಳಿ ಸೂಚನೆಯನ್ನು ನಾನು ಪ್ರಶ್ನೋತರ ಮುಗಿದ ನಂತರ ತೆಗೆದುಕೊಳ್ಳಬೇಕು. ಆದ್ದರಿಂದ ಶೂನ್ಯವೇಳೆ ಈ ದಿವಸ ಬರುವುದಿಲ್ಲ. ಆದ್ದರಿಂದ ಎಲ್ಲ ಸದಸ್ಯರು ದಯಮಾಡಿ ಸಹಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ದಯಮಾಡಿ ಅತ್ಯಂತ ಆಗತ್ಯವಾದ ನಾಲ್ಕೈದು ಪ್ರಸ್ತಾವಗಳು ಇವೆ. ಆದ್ದರಿಂದ ಸದನವನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿದರೆ.. .....

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪಿಕೊಂಡರು ಕೂಡ ನಾವು ಶೂನ್ಯ ವೇಳೆಯಲ್ಲಿ ಪ್ರಸ್ತಾವ ಮಾಡಿ ಆ ನಂತರ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಪ್ರಿಲಿಮಿನರಿ ಸಬ್‌ಮಿಶನ್ ಆಗಬೇಕು. ಒಂದು ವೇಳೆ ಬೇಗ ಮುಗಿದರೆ ಆನಂತರ ಬೇಕಾಗಿದ್ದರೆ 10 ನಿಮಿಷ ಅವಕಾಶ ಕೊಡುತ್ತೇನೆ ಬೇಗ ಬೇಗ ಮಾತನಾಡಿ ಮುಗಿಸಬೇಕು.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರ, ಕೆ.ಪಿ.ಸಿ ಸೌಕರರ ಮುಷ್ಕರ ಮುಂತಾದವುಗಳನ್ನು ನಾವು ಪ್ರಸ್ತಾಪ ಮಾಡುವುದು ಯೋಗ್ಯವೆಂದು ಗೊತ್ತಾಗುತ್ತಿಲ್ಲ.

ಅಧ್ಯಕ್ಷರು : ಅದನೆಲ್ಲಾ ಆ ಮೇಲೆ ತೆಗೆದುಕೊಳ್ಳೋಣ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ತಾವು ಅವಕಾಶವನ್ನು ಯಾವುದಾದರೂ ಸಂದರ್ಭದಲ್ಲಿ ಮಾಡಿಕೊಟ್ಟರೆ ಪ್ರಸ್ತಾಪ ಮಾಡಲಿಕ್ಕೆ ಸಹಾಯವಾಗುತ್ತದೆ.

11.10 ಪಿ.ಎಂ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಭಾಪತಿಗಳೆ,.....

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಚರ್ಚೆ ನೀವೇ ಮಾಡಿ, ಈ ವಿಚಾರದ ಘನತೆ ಅರ್ಥ ಮಾಡಿಕೊಂಡರೆ ಸರ್ಕಾರವೇ ಒಂದು ಅಧಿಕೃತವಾದಂತಹ ರೆಜಲ್ಯೂಷನ್ ತರಬೇಕು ಈ ದೃಷ್ಟಿಯಿಂದ ಸರ್ಕಾರ ಒಪ್ಪುವುದಾದರೆ ಸಭೆಯನ್ನು10-15 ನಿಮಿಷ ಮುಂದೂಡಿ ನೀವೇ ಒಂದು ಅಧಿಕೃತ ನಿರ್ಣಯ ತಂದರೆ ಹೆಚ್ಚು ಸೌಜನ್ಯವಾಗುತ್ತದೆ. ನೀವೇ ಯೋಚನೆ ಮಾಡಿ, ನಿಮಗೆ ಬಿಟ್ಟಿದ್ದು, ಇಲ್ಲದಿದ್ದರೆ ನಾನು ನಿಲುವಳಿ ಸೂಚನೆ ಮಂಡಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸಲಹೆ ಕೊಟ್ಟ ಹಾಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಚರ್ಚೆ ಮಾಡುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ತಾವು ಅವರಿಗೆ ಅನುಮತಿ ಕೊಟ್ಟರೆ ಅವರು ರೈಸ್ ಮಾಡಿರದೆ ನನ್ನ ಅಭ್ಯಂತರ ಏನೂ ಇಲ್ಲ. ಮಾನ್ಯ ನಂಜೇಗೌಡರು ಒಂದು ಸಲಹೆ ಕೊಟ್ಟಿದ್ದಾರೆ.....

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ನಿರ್ಣಯ ತರುವುದು ಆಮೇಲೆ ಇರಲಿ. ವಿಚಾರ ಏನು ಎಂದು ಗೊತ್ತಾಗಬೇಕು, ಆಲಮಟ್ಟಿ ಬಗ್ಗೆ ಏನಾಗಿದೇ, ಏನು ಮಾಡಿದ್ದಾರೆ, ಈ ಸರ್ಕಾರದ ಹೊಣೆ ಎಷ್ಟು ಅದೆಲ್ಲಾ ಚರ್ಚೆ ಆಗಬೇಕಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ ನಾನು ಏನು ಹೇಳುತ್ತೇನೆಂದರೆ, ಆ ವಿಚಾರವನ್ನು ಸಾಕಷ್ಟು ಸಲ ಈ ಸದನದಲ್ಲಿ ಮತ್ತು ಹಿಂದಿನ ಅಧಿವೇಶನದಲ್ಲಿ ಕೂಡ ಚರ್ಚೆ ಮಾಡಿದ್ದೇವೆ. ಈಗ ಉದ್ಭವವಾಗಿರತಕ್ಕಂಥದ್ದು ಏನೆಂದರೆ, ನಿನ್ನೆ ಆಂಧ್ರಪ್ರದೇಶ ವಿಧಾನ ಸಭೆಯಲ್ಲಿ ಆಗಿರತಕ್ಕ ಕಲಾಪಗಳನ್ನು ಅನುಸರಿಸಿ ಬಂದಿರತಕ್ಕ ಒಂದು ಸನ್ನಿವೇಶ ಈಗ ಅದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೊ ಕೇಳೋಣ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜೇಗೌಡರು ಏನು ಒಂದು ಸಲಹೆ ಕೊಟ್ಟಿದ್ದಾರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ, ಆದರೆ ಸರ್ಕಾರ ಇದರ ಬಗ್ಗೆ ಏನು

ಯೋಚನೆ ಮಾಡುತ್ತೀವಿ ಏನ್ಕತ್ಕಂಥದ್ದು ಈ ಸಭೆಗೆ ಗೌರವ ಕೊಡುವುದಕ್ಕೆ ಅಂತ ಹೇಳಿದ್ದಾಯಿತು ಅರ್ಥ ಪೂರ್ಣವಾಗುತ್ತದೆ. ಅದಕ್ಕೋಸ್ಕರ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ. ಸರ್ಕಾರದ ಅಭಿಪ್ರಾಯ ಏನು ಎಂದು ತಿಳಿದುಕೊಂಡು ಆಮೇಲೆ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜೇಗೌಡರು ಏನು ಸಲಹೆ ಕೊಟ್ಟಿದ್ದಾರೆ, ಆ ಸಲಹೆ ಪ್ರಕಾರ ತಾವು ಸಭೆಯನ್ನು ಮುಂದೂಡಿ, ಸರ್ಕಾರ ಅಧಿಕೃತ ನಿರ್ಣಯ ತಂದು ಸರ್ವಾನುಮತದಿಂದ ನಿರ್ಣಯ ತೆಗೆದುಕೊಳ್ಳತಕ್ಕಂಥದ್ದು, ಬೇರೆ ವಿಷಯ. ಆದರೆ ಅದನ್ನು ಯಾವ ರೀತಿಯಾಗಿ ಮಾಡಬೇಕೆಂದು ಎಲ್ಲರೂ ಒಪ್ಪಿದರೆ ಒಟ್ಟಿಗೆ ಸೇರಿ ಅದನ್ನು ಮಾಡೋಣ. ಆದರೆ ನಾವು ಇಲ್ಲಿ ಪ್ರಶ್ನೆ ಮಾಡಿದ್ದು ಏಕೆಂದರೆ, ಈಗಾಗಲೇ ಆಂಧ್ರ ಪ್ರದೇಶ ವಿಧಾನ ಸಭೆಯಲ್ಲಿ ಮಾನ್ಯ ಚಂದ್ರಬಾಬು ನಾಯ್ಡುರವರು ಒಂದು ಅಧಿಕೃತ ನಿರ್ಣಯವನ್ನು ಹೌಸ್‌ನಲ್ಲಿ ತಂದು ಸರ್ವಾನುಮತದಿಂದ ಪಾಸ್‌ಮಾಡಿಕೊಂಡು ಆ ಒಂದು ಅನಧಿಕೃತ ಅಥವಾ ಇಲ್ಲೀಗಲ್ ಕಮಿಟಿ ಏನಿತ್ತು ಆ ಕಮಿಟಿಯ ವರದಿಯ ಆಧಾರದ ಮೇಲೆ ಇವತ್ತು ಕೇಂದ್ರ ಸರ್ಕಾರದಲ್ಲಿ ಅಥವಾ ಸಂಬಂಧಪಟ್ಟ ಎಲ್ಲಾ ಇಲಾಖೆಗಳಲ್ಲಿ ಹೋಗಿ ತಮ್ಮ ಪ್ರಭಾವವನ್ನು ಬೀರಿ ಈಗಾಗಲೇ ಅಲಮಟ್ಟಿ ಕನ್ಸ್‌ಟ್ರಕ್ಷನ್ ಕೆಲಸ ಏನು ನಡೆಯುತ್ತಿದೆ ಇದರ ಎತ್ತರವನ್ನು ತಡೆಹಿಡಿಯತಕ್ಕ ಪ್ರಯತ್ನ ನಡೆಯುತ್ತಿದೆ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಈಗ ಅವರು ಏನು ನಿಲುವಳಿ ಸೂಚನೆ ತಂದಿದ್ದಾರೆ ಅದರ ಬಗ್ಗೆ ನಮ್ಮದೇನೂ ಅಭ್ಯಂತರ ಇಲ್ಲ, ತಾವು ಅನುಮತಿ ಕೊಟ್ಟರೆ ಚರ್ಚೆಗೆ ಯಾವ ಅಭ್ಯಂತರ ಇಲ್ಲ, ಚರ್ಚೆಗೆ ನಾವು ಯಾವಾಗಲೂ ಸಿದ್ಧರಾಗಿದ್ದೇವೆ. ಆದರೆ ಹಿರಿಯ ಸದಸ್ಯರಾದ ಮಾನ್ಯ ನಂಜೇಗೌಡರು ಸರ್ಕಾರಕ್ಕೆ ಒಂದು ಸಲಹೆ ಕೊಟ್ಟಿದ್ದಾರೆ, ಇದು ಅತ್ಯಂತ ಮಹತ್ವವಾದ ವಿಚಾರ, ರಾಜ್ಯದ ಹಿತಕ್ಕೆ ಏನಾದರೂ ಹೆಚ್ಚು ಕಡಿಮೆ ಆಗದ ಹಾಗೆ ಕಾಯತಕ್ಕಂಥಾದ್ದಕ್ಕೆ ಎಲ್ಲರ ಜವಾಬ್ದಾರಿ ಇದೆ, ಈ ವಿಚಾರದಲ್ಲಿ ಇಡೀ ಸದನ ಒಟ್ಟಿಗೆ ಆಗಬೇಕಾಗುತ್ತದೆ. ಅದಕ್ಕೋಸ್ಕರ ಸರ್ಕಾರದಿಂದಲೇ ಅಧಿಕೃತ ನಿರ್ಣಯ ಬಂದರೆ ನಮಗೆ ಚರ್ಚೆಗೆ ಬಹಳ ಅನುಕೂಲವಾಗುತ್ತದೆ. ತಾವು ಚರ್ಚೆ ಬೇಕಾದರೆ ಮಾಡಿ ನಿರ್ಣಯ ಬೇಕಾದರೆ ಒಪ್ಪಿಕೊಳ್ಳೋಣ, ಸರ್ಕಾರದವರು ಅಧಿಕೃತ ನಿರ್ಣಯ ತರುವುದಕ್ಕೆ ಒಪ್ಪಿಕೊಂಡಿದ್ದೇವೆ ಆದ್ದರಿಂದ ತಾವು 10 ನಿಮಿಷಗಳ ಕಾಲ ಸದನವನ್ನು ಮುಂದೂಡಿ, ಮಾನ್ಯ ವಿರೋಧ ಪಕ್ಷದ ನಾಯಕರನ್ನು, ವಿರೋಧ ಪಕ್ಷದ ಮುಖಂಡರುಗಳನ್ನು ಕರೆಯೋಣ, ಅಷ್ಟರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ, ಎಲ್ಲರೂ ತಮ್ಮ ಕೋಣೆಯಲ್ಲಿ ಕುಳಿತು ಚರ್ಚೆ ಮಾಡಿಕೊಂಡು ಸದನಕ್ಕೆ ಬಂದರೆ ಅದಕ್ಕೆ ಹೆಚ್ಚು ಮಹತ್ವ ಬರುತ್ತದೆ, ನಮ್ಮ ರಾಜ್ಯಕ್ಕೆ ಹೆಚ್ಚು ಶಕ್ತಿ ಬರುತ್ತದೆ, ದೃಷ್ಟಿಯಿಂದ ನಾನು ಹೇಳುತ್ತೇನೆ.

ಅಧ್ಯಕ್ಷರು : ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ : ಮಾನ್ಯ ಅಧ್ಯಕ್ಷರೆ, ರಾಜ್ಯದ ಹಿತದೃಷ್ಟಿಯಿಂದ ತಾವು ಏನು ಹೇಳುತ್ತೀರಿ ಅದನ್ನು ಕೇಳುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಆದರೆ ನೀವು ಮಾಡಿದಂಥ ತಪ್ಪು ಏನು ಇದೆ ಅದನ್ನು ನಾವು ಹೇಳಬೇಕಲ್ಲಾ, ತಾವು ಯಾವ ರೀತಿಯಾಗಿ ನಡೆದುಕೊಂಡಿದ್ದೀರಿ, ನಾವು ಬೇಡ

ಎಂದರೂ ಕೂಡ ಅವರಿಗೆ ನೀವು ಹೋಗಿ ಕೈಮಿಲಾಯಿಸಿದ್ದೀರಿ, ಅವರಿಗೆ ಹೋಗಿ ಭೇಟಿಯಾಗಿದ್ದೀರಿ, ಅದರ ಬಗ್ಗೆ ಕೂಡ ಚರ್ಚೆ ಮಾಡಬೇಕಲ್ಲ ನಾವು ನೂರು ಸಲ ಹೇಳಿದ್ದೇವೆ, ನೀವು ಹೋಗುವುದು ಬೇಡ, ಅದು ಅನಧಿಕೃತ ಸಮಿತಿ, ಇಲ್ಲೀಗಲ್ ಸಮಿತಿ, ಅದಕ್ಕೆ ಯಾವ ರೀತಿಯ ಮಾನ್ಯತೆ ಕೊಡಬೇಡಿ, ಆ ಸಮಿತಿ ನಮ್ಮ ರಾಜ್ಯದಲ್ಲಿ ವಿಜಿಟ್ ಮಾಡಲು ಬಿಡಬೇಡಿ ಎಂದು ನಾವು ಹೇಳಿದರೂ ಕೂಡ ನೀವು ಕೇಳದೆ ಹೋಗಿದ್ದೀರಿ, ಅದರ ಬಗ್ಗೆಯೂ ನಾವು ಹೇಳಬೇಕಾಗುತ್ತದೆ ಅಧಿಕೃತ ನಿರ್ಣಯವನ್ನು ನಾವು ಎಲ್ಲರೂ ಕೂಡ ಒಮ್ಮತದಿಂದ ಪಾಸ್ ಮಾಡೋಣ. ಆದರೆ ನೀವು ಮಾಡಿದ ತಪ್ಪಿಗೆ ನಾವೆಲ್ಲರೂ ಕೂಡ ಹೊಣೆಗಾರರೆ? ನೀವು ಮನಸ್ಸು ಬಂದ ರೀತಿಯಲ್ಲಿ ನಡೆದುಕೊಂಡು ಎಲ್ಲರೂ ಕೂಡ you are taking everything for granted. ನಾವು ಏನು ತಪ್ಪು ಮಾಡಿದರೂ ಜನ ಸಹಿಸಿಕೊಂಡು ಹೋಗುತ್ತಾರೆ, ಸದನದಲ್ಲಿ ಶಾಸಕರು ಸಹಿಸಿಕೊಳ್ಳತ್ತಾರೆ, ಈ ಸದನ ನಾವು ಹೇಳಿದಂತೆ ನಡೆಯುತ್ತದೆ, ಎನ್ನತಕ್ಕಂಥ ಅಭಿಪ್ರಾಯ ನಿಮಗೆ ಬಂದಿದೆ. ಅದಕ್ಕೆ ನಾನು ಹೇಳುವುದೇನೆಂದರೆ,ಈಗ ಸದನ ಮುಂದೂಡಿ ಸರ್ಕಾರ ತರುವ ಅಧಿಕೃತ ನಿರ್ಣಯಕ್ಕೆ ನಮ್ಮೆಲ್ಲರ ಬೆಂಬಲ ಇದೆ. ಏಕೆಂದರೆ ರಾಜ್ಯದ ಹಿತದೃಷ್ಟಿಯಿಂದ ನಾವು ಎಲ್ಲರೂ ಒಂದೇ ಇದ್ದೇವೆ, ಆದರೆ ನೀವೇನು ಪದೇ ಪದೇ ತಮ್ಮ ಮಾಡುತ್ತಿದ್ದೀರಿ, ಅದನ್ನೇ ಲಘುವಾಗಿ ತೆಗೆದುಕೊಂಡಿದ್ದೀರಿ, ನಿಮ್ಮಲ್ಲಿ ಮುಂದಾಲೋಚನೆ ಏನೂ ಇಲ್ಲ, ಅದರ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ವಿರೋಧ ಪಕ್ಷದ ನಾಯಕರ ವಾದವನ್ನು ಸಮರ್ಥನೆ ಮಾಡತ್ತೇನೆ ಪ್ರಶ್ನೆ ಏನೆಂದರೆ, ಇವತ್ತು ನಾವು ಎಲ್ಲರೂ ಸೇರಿ ಒಟ್ಟಾಗಿ ಒಂದು ನಿರ್ಣಯ ಮಾಡೋಣ ಎಂದು ಹೇಳುತ್ತಾರಲ್ಲ, ಆದರೆ ಆ ಸಮಿತಿ ಬಂದಾಗ ಸರ್ಕಾರ ವಿರೋಧ ಮಾಡಲಿಲ್ಲ, ಆ ಸಮಿತಿಗೆ ಹಿಂದಕ್ಕೆ ಹೋಗಿ ಎಂದು ಹೇಳಲಿಲ್ಲ ಮತ್ತು 4 ಜನ ಮುಖ್ಯ ಮಂತ್ರಿಗಳನ್ನು ನೇಮಕ ಮಾಡಿದರೂ ಅದನ್ನು ವಿರೋಧ ಮಾಡಲಿಲ್ಲ, ಕೇಂದ್ರ ಸರ್ಕಾರ ಹೆಜ್ಜೆ ಹೆಜ್ಜೆಗೂ ನಮ್ಮ ರಾಜ್ಯವನ್ನು ಕಡೆಗಣಿಸಿದ್ದಾರೆ, ನಮ್ಮ ಜನತೆಯನ್ನು, ಶಾಸನ ಸಭೆಯನ್ನು ಕಡೆಗಣಿಸಿದ್ದಾರೆ ಹೀಗಿರುವಾಗ ಇವತ್ತು ಎಲ್ಲರೂ ಸೇರಿ ಸರ್ವಾನುಮತದ ನಿರ್ಣಯ ಮಾಡೋಣವೆಂದು ಹೇಳುತ್ತಿದ್ದಾರೆ. ನಾವೆಲ್ಲರೂ ಸರ್ವಾನುಮತದ ನಿರ್ಣಯವನ್ನು ಒಪ್ಪುತ್ತೇವೆ ಆದರೆ ಸರ್ಕಾರದ ಮೇಲೆ ಒಂದು ಖಂಡನಾ ನಿರ್ಣಯವನ್ನು ನಾವು ತರಬೇಕಾಗಿದೆ ಸರ್ಕಾರ ಇದುವರೆವಿಗೂ ಹೇಗೆ ನಡೆದುಕೊಂಡಿದೆ ಏನು ಮಾಡಿದ್ದಾರೆ ಎಂದು ಪ್ರತಿ ಹಂತದಲ್ಲಿ ಸರ್ಕಾರ ಮಾಡಿರತಕ್ಕಂಥ ವಿಚಾರಗಳನ್ನು ನಾವು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಕೇವಲ ತಮ್ಮ ಖುರ್ಚಿಯನ್ನು ಉಳಿಸಿಕೊಳ್ಳವುದಕ್ಕೋಸ್ಕರ ಪದೇ ಪದೇ ಈ ರೀತಿ ಮಾಡಿಕೊಂಡು, ಪ್ರಧಾನ ಮಂತ್ರಿಗಳು ಅಲ್ಲಿರಬೇಕು, ಅವರ ಅಂಕೆಯಲ್ಲಿ ಇವರು ಇಲ್ಲಿರಬೇಕು....

(ಗೊಂದಲ)

ಅಧ್ಯಕ್ಷರು : ದಯಮಾಡಿ ಇವರ ಖುರ್ಚಿ ವಿಚಾರಕ್ಕೆ ಅವರು ಉತ್ತರ ಕೊಡಲಿ, ನಾನು ಎಲ್ಲಾ ಪತ್ರಿಕೆಗಳನ್ನೂ ಗಮನಿಸುತ್ತಿದ್ದೇನೆ. ಪ್ರಧಾನ ಮಂತ್ರಿಗಳು ನನಗೆ ಗೊತ್ತಿದ್ದ ಹಾಗೆ, ಮಾನ್ಯ ಮುಖ್ಯ

ಮಂತ್ರಿಗಳ ಸಭೆ ನಡೆದಾಗ ಅವರು ಎಲ್ಲೂ ಪಾಲ್ಗೊಳ್ಳಲಿಲ್ಲ. ಸರ್ಕಾರದವರು ಅದನ್ನು ಕ್ಲಾರಿಫೈ ಮಾಡಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಎರಡು ವಿಷಯಗಳನ್ನು ನಾನು ಸ್ಪಷ್ಟಪಡಿಸುತ್ತೇನೆ ಮೊದಲನೆಯದಾಗಿ ಪ್ರಧಾನ ಮಂತ್ರಿಗಳು ಈ ವಿಚಾರದಲ್ಲಿ ಎಲ್ಲೂ ಹಸ್ತಕ್ಷೇಪ ಮಾಡಿಲ್ಲ, ಎರಡನೆಯದಾಗಿ, ಸರ್ಕಾರ ಎಲ್ಲೂ ತಪ್ಪಾಗಿ ನಡೆದುಕೊಂಡಿಲ್ಲ. ಅದು ಅನಧಿಕೃತ ಸಮಿತಿ, ಅದಕ್ಕೆ ಯಾವುದೇ ಲೀಗಲ್ ಸ್ಟೇಟಸ್ ಇಲ್ಲ, ಅದನ್ನು ನಾವು ಪರಿಗಣಿಸೆ ಮಾಡುವುದಿಲ್ಲ ಎಂದು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇವೆ ಆದರೆ ಒಂದು ಗುಡ್‌ವಿಲ್ ಕಮಿಟಿಗೆ ಎರಡೂ ರಾಜ್ಯಗಳು ಒಪ್ಪಂದಕ್ಕೆ ಬನ್ನಿ ಎಂದು ಕೇಳಿದ್ದರಿಂದ...

ಶ್ರೀ ವಾಟಾಳ್ ನಾಗರಾಜ್ : ಯಾರನ್ನು ಕೇಳಿದಿರಿ? ಯಾರು ಒಪ್ಪಿದ್ದಾರೆ, ಈ ಸದನದ ಒಪ್ಪಿಗೆ ಕೇಳಿದ್ದೀರೋ?

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ, the oppositiion leader has raised a very relevant point. ಅದು ರೇಕಾರ್ಡ್‌ನಲ್ಲಿ ಹೋಗುತ್ತದೆ, ಅವರು ದೇಶದ ಪ್ರಧಾನ ಮಂತ್ರಿಗಳಾಗಿದ್ದಾರೆ, ನಾವು ಈ ಸದನದಲ್ಲಿ ನಮಗೆ ಸಂಬಂಧಪಟ್ಟ ಯಾವ ವಿಚಾರ ಬೇಕಾದರೂ ಚರ್ಚೆ ಮಾಡೋಣ, ತಮ್ಮ ಖುರ್ಚಿ ಭದ್ರ ಮಾಡಿಕೊಳ್ಳಲಿಕ್ಕೆ ಎನ್ನುವಂತಹ ಮಾತನ್ನು ಹೇಳುವಾಗ ಪ್ರಧಾನಮಂತ್ರಿಗಳ ಹೆಸರನ್ನು ತೆಗೆದಿದ್ದಾರೆ. ನಾನು ಎಲ್ಲಾ ನಡವಳಿಕೆಗಳನ್ನು ಪತ್ರಿಕೆಗಳಲ್ಲಿ ಗಮನಿಸುತ್ತಾ ಬಂದಿದ್ದೇನೆ ಅದಕ್ಕೆ ನಾನು ಸರ್ಕಾರವನ್ನು ಕೇಳುತ್ತಾ ಇದ್ದೇನೆ. ತಾವು ದಯಮಾಡಿ ಸ್ವಲ್ಪ ಆಲೋಚನೆ ಮಾಡಿ ಹೇಳಿ ಪ್ರಧಾನಮಂತ್ರಿಗಳು ನಿಮ್ಮ ಈ ಯುನೈಟೆಡ್ ಫ್ರಂಟ್ ಅರೇಂಜ್‌ಮೆಂಟ್‌ನಲ್ಲಿ ಎಲ್ಲಾ ಮುಖ್ಯ ಮಂತ್ರಿಗಳ ಸಭೆಯಲ್ಲಿ ಪ್ರಧಾನ ಮಂತ್ರಿಗಳು ಆಸೀನರಾಗಿ ಒಪ್ಪಿಗೆ ಕೊಟ್ಟರತಕ್ಕಂಥದ್ದು ನನ್ನ ಗಮನಕ್ಕೆ ಎಲ್ಲೂ ಬಂದಿಲ್ಲ. ಸತ್ಯಾಂಶ ಏನು ಎನ್ನುವುದನ್ನು ದಯಮಾಡಿ ಸದನಕ್ಕೆ ತಿಳಿಸಿ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದ್ದೇನೆ, ಪ್ರಧಾನ ಮಂತ್ರಿಗಳು ಈ 4 ಜನ ಮುಖ್ಯಮಂತ್ರಿಗಳನ್ನು ಸೇರಿಸುವುದಕ್ಕೆ ಯಾವುದೇ ಆದಂತಹ ಹಸ್ತಕ್ಷೇಪ ಮಾಡಿಲ್ಲ, ಅದು ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಮಾಡಿಕೊಂಡಿರತಕ್ಕಂಥ ....

ಅಧ್ಯಕ್ಷರು : ನನಗೆ ಅಷ್ಟೇ ಬೇಕಾಗಿರುವುದು ಉಳಿದಿದ್ದು ಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : 4 ಜನ ಮುಖ್ಯಮಂತ್ರಿಗಳು ಅವರಾಗಿಯೇ ಉದ್ಭವವಾಗಿಬಿಟ್ಟರೇ!

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎರಡೂ ರಾಜ್ಯಗಳ ರಾಜಕೀಯ ಪಕ್ಷಗಳು ಎಂದು ಹೇಳಿ, ಮುಖ್ಯಮಂತ್ರಿಗಳು ಎಂದು ಹೇಳಿದರೆ ಅದು ಲೀಗಲ್ ಆಗುತ್ತಿತ್ತು.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಅನಧಿಕೃತ ಸಮಿತಿ ಬಂದಾಗ ನಾವು ಇಡೀ ರಾಜ್ಯದಲ್ಲಿ ಎಲ್ಲರೂ ವಿರೋಧ ಮಾಡಿದ್ದೇವೆ.

ಅಧ್ಯಕ್ಷರು : ಏನೂ, ಅದನ್ನೆಲ್ಲ ಚರ್ಚೆ ಮಾಡಬಹುದು, ನಾನು ನಿಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಅಂತಹ ಸಂದರ್ಭದಲ್ಲಿ ವಿರೋಧ ಮಾಡಿದಂತಹ ಜನರನ್ನು ಅರೆಸ್ಟ್ ಮಾಡಿ ಜೈಲ್‌ಗೆ ಕಳುಹಿಸಿದ್ದಾರೆ. ಆಗ ಸರ್ಕಾರವೇ ಹೇಳಿದ್ದರೆ ಇವತ್ತು ಈ ಪರಿಸ್ಥಿತಿ ಬರುತ್ತಿರಲಿಲ್ಲ. ನಮ್ಮ ಬಿಜೆಪಿಯ ಯಡಿಯೂರಪ್ಪನವರು, ಬಸವನಗೌಡ ಪಾಟೀಲ್‌ರು ಇವರೆಲ್ಲರೂ ಕೂಡ ಜೈಲಿಗೆ ಹೋಗುವಂತಹ ಪರಿಸ್ಥಿತಿ ಬಂತು.

ಶ್ರೀ ವಾಟಾಳ್ ನಾಗರಾಜ್ : ಆ ಸಮಿತಿಯವರಿಗೆ ಅಶೋಕ ಹೋಟಲ್‌ನಲ್ಲಿ ಸ್ವಾಗತ ಕೊಟ್ಟಿದ್ದಾರೇ, ಹೋಗಿ ಬರಬಹುದು ಎಂದು ಹೇಳಿದ್ದಾರೆ. ಏನು ಇದು? ಇಷ್ಟೆಲ್ಲ ಮಾಡಿ ಸರ್ಕಾರ ಇವತ್ತು ನಮಗೆ ಇದೆಲ್ಲಾ ಏನೂ ಗೊತ್ತೇ ಇಲ್ಲ ಎನ್ನುವ ರೀತಿಯಲ್ಲಿ ಮೌನವಾಗಿರುವುದಾರರೆ ಸರ್ಕಾರದ ಮೇಲೆ ಖಂಡನಾ ನಿರ್ಣಯವನ್ನು ನಾವು ತರಬೇಕು, ಖಂಡನಾ ನಿರ್ಣಯದ ಬಗ್ಗೆ ಚರ್ಚೆ ಆಗಬೇಕು.

ಶ್ರೀ ಕೆ. ಎಸ್.ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇಲ್ಲಿ ಎರಡು ಪ್ರಶ್ನೆಗಳು ಇವೆ, ಮೊದಲನೆಯದಾಗಿ ಸರ್ಕಾರವನ್ನು ಖಂಡನೆ ಮಾಡಬೇಕು. ಇದು ಮೊದಲನೆಯ ನಿರ್ಣಯ ಎರಡನೆಯದು ಇಡೀ ರಾಜ್ಯದ ಜನ ಈ ವಿಷಯದಲ್ಲಿ ಒಗ್ಗಟ್ಟಾಗಿ ಇರಬೇಕು, ಎನ್ನುವುದು ಇನ್ನೊಂದು ನಿರ್ಣಯ ಕೂಡ ಮಾಡಬೇಕು. ಎರಡೂ ಬಹಳ ಪ್ರಾಮುಖ್ಯವಾದವು.

ಅಧ್ಯಕ್ಷರು : ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ, ತಾವು ಎಲ್ಲರೂ ಕೂಡ ಬಹಳ ಅನುಭವಸ್ಥರಿದ್ದೀರಿ, ಜನಪ್ರತಿನಿಧಿಗಳಾಗಿ ಇಲ್ಲಿ ಕುಳಿತಿರತಕ್ಕ ನಮಗೆ ರಾಜ್ಯದ ಹಿತ ಕಾಪಾಡತಕ್ಕಂತಹ ಜವಾಬ್ದಾರಿ ನಮ್ಮೆಲರ ಹೆಗಲ ಮೇಲೆ ಇದೆ. ನಿನ್ನೆ ಆಂಧ್ರಪ್ರದೇಶದ ವಿಧಾನ ಸಭೆಯಲ್ಲಿ ಒಂದು ತೀರ್ಮಾನವನ್ನು ಒಕ್ಕೊರಲಿನಿಂದ ಪಾಸಮಾಡಿದ್ದಾರೆ, ನಾವು ಕೂಡ ಈ ವಿಚಾರದಲ್ಲಿ ಭಿನ್ನಮತ ಇಲ್ಲ ಒಗ್ಗಟ್ಟಾಗಿದ್ದೇವೆ, ಎಂದು ತೋರಿಸುವ ಕಾರಣಕ್ಕಾಗಿ ನಾನು ತಮ್ಮೆಲರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ, ಸರ್ಕಾರದವರು ತಾವು ಎಲ್ಲಾರೂ ನನ್ನ ಕೋಣೆಗೆ ಬನ್ನಿ, ಕುಳಿತು ಮಾತನಾಡೋಣ, ಒಂದು ಅಧಿಕೃತ ನಿರ್ಣಯವನ್ನು ಡ್ರಾಫ್ಟ್ ಮಾಡಿ, ಆ ನಿರ್ಣಯ ಒಪ್ಪಿಕೊಂಡು ಅನಂತರ ಚರ್ಚೆಯಲ್ಲಿ ಭಾಗವಹಿಸತಕ್ಕ ಸಂದರ್ಭದಲ್ಲಿ ತಮಗೆ ಏನೆಲ್ಲ ಹೇಳಬೇಕು ಎಂದು ಅನಿಸಿಕೆಗಳು ಇವೆ ಅದೆಲ್ಲಾ ಹೇಳಿ, ಅದನ್ನು ಮಾಡಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ ತಾವು ಹೇಗೆ ಹೇಳುತ್ತಿರೋ ಹಾಗೆ ಮಾಡೋಣ, ರಾಜ್ಯದ ಹಿತದೃಷ್ಟಿಯಿಂದ.

ಶ್ರೀ ಕೆ.ಎನ್. ನಾಗೇಗೌಡ : ತಮ್ಮ ಸಲಹೆಯನ್ನು ಸರ್ಕಾರ ಒಪ್ಪಿದೆ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ತಮ್ಮ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತೇವೆ ಮತ್ತು ಈ ಸದನದಲ್ಲಿ ಎಲ್ಲಾ ಪಕ್ಷದವರು ಯಾವುದೇ ಬೇಧ ಭಾವವಿಲ್ಲದೆ, ಒಗ್ಗಟ್ಟಾಗಿ ರಾಜ್ಯದ ಹಿತದೃಷ್ಟಿಯಿಂದ ನಮ್ಮ ನೀರಾವರಿ ಹಕ್ಕನ್ನು ಕಾಪಾಡಿಕೊಳ್ಳುವುದಕೋಸ್ಕರ ನಾವು ಎಲ್ಲರೂ ಕೂಡ ಬದ್ಧರಾಗಿದ್ದೇವೆ. ಆದರೆ ಅನೇಕ ಸಲ ವಿರೋಧ ಪಕ್ಷದ ನಾಯಕರು ಹೇಳಿದಂತಹ ಮಾತುಗಳನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡಿಲ್ಲ, ಅವರು ಬರತಕ್ಕ ಅವಶ್ಯಕತೆ ಇಲ್ಲವೆಂದು ನಾವು ಹೇಳಿದ್ದೇವೆ.

ಅಧ್ಯಕ್ಷರು : ನಾನು ಅದನ್ನೇ ತಮಗೆ ಹೇಳಿದ್ದೇನೆ. ನಾವು ಏನು ನಿರ್ಣಯವನ್ನು ಪ್ರಪ್ಪೋಸ್ ಮಾಡಿಕೊಂಡು ಬಂದು ಇಲ್ಲಿ ಪಾಸ್ ಮಾಡುತ್ತೇವೆ, ಆ ಸಂದರ್ಭದಲ್ಲಿ ಚರ್ಚೆ ಮಾಡುವಾಗ ತಾವು ಹೇಳಬೇಕಾಗಿದ್ದನ್ನೆಲ್ಲ ಹೇಳಿ ಒಂದು 10 ನಿಮಿಷನಂತರ ಹೇಳಿ, ನಾನು ತಮ್ಮಯಾರ ಅಭಿಪ್ರಾಯಗಳನ್ನು ತಡೆಯುವುದಕ್ಕೆ ಹೋಗುವುದಿಲ್ಲ. I think I have your consent. ಈಗ ಸಭೆಯನ್ನು ಮುಂದೂಡಿ ಬಹುಶಃ 12 ಗಂಟೆಗೆ ಮೊದಲನೆ ಏನೂ ಆಗುವುದಿಲ್ಲ, ಪುನಃ 12 ಗಂಟೆಗೆ ಸೇರೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಆ ನಿರ್ಣಯವನ್ನು ಓದಲಿಕ್ಕೇ 10 ನಿಮಿಷಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೆ, ಮೊದಲೇ ನಿರ್ಣಯ ಮಾಡಿದ್ದರೆ ಮಾನ್ಯ ನಂಜೇಗೌಡರು ಪ್ರಸ್ತಾಪ ಮಾಡುವುದಕ್ಕಿಂತ ಮುಂಚೆ ಸರ್ಕಾರವೇ ಸ್ವಯಂ ಪ್ರೇರಣೆಯಿಂದ ಮಾಡಬೇಕಾಗಿತ್ತು.

ಅಧ್ಯಕ್ಷರು : ಅದನ್ನೆಲ್ಲಾ ಚರ್ಚೆ ಮಾಡೋಣ ಬನ್ನಿ ಈಗ ಸಭೆಯನ್ನು ಮುಂದೂಡಿ ಪುನಃ 12 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸಭೆಯು ಪುನಃ ಸಂಜೆ 4.20ಕ್ಕೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಸರ್ಕಾರಿ ನಿರ್ಣಯ ಆಲಮಟ್ಟಿ ಡ್ಯಾಂ ಕುರಿತು

+ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಎರಡು ದಿನಗಳ ಹಿಂದೆ ಆಂಧ್ರಪ್ರದೇಶದ ವಿಧಾನಸಭೆಯಲ್ಲಿ ಒಂದು ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿ ಕೇಂದ್ರ ಸರ್ಕಾರಕ್ಕೆ ಕೆಲವು ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆಂಬ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದೆ; ಹಾಗೂ ತಾವೆಲ್ಲರೂ ಓದಿದ್ದೀರಿ. ಅಧಿಕೃತವಾಗಿ ಈ ಬಗ್ಗೆ ನನಗೆ ಸರ್ಕಾರದಿಂದ ಯಾವುದೇ ಅಧಿಕಾರಿಯಿಂದ ಮಾಹಿತಿ ಬಂದಿಲ್ಲ. ಆದರೂ ಈ ವಿಷಯ ನಿನ್ನೆ ರಾಜ್ಯಸಭೆಯಲ್ಲಿ ಪ್ರಸ್ತಾಪವಾಯಿತು. ಕೇಂದ್ರ ಸರ್ಕಾರದವರು ಇದುವರೆಗೆ ಇದರ ಬಗ್ಗೆ ಯಾವುದೇ ನಿಲುವನ್ನು ತಾಳಿಲ್ಲ ಅಂದಮೇಲೆ ವಿರೋಧಪಕ್ಷದ ನಾಯಕರುಗಳೊಡನೆ ಸಮಾಲೋಚನೆ ಮಾಡಿ ನಾವೂ ಸಹಿತ ನಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು. ಆಂಧ್ರಪ್ರದೇಶದ ವಿಧಾನಸಭೆಯಲ್ಲಿ ಚರ್ಚೆ ಮಾಡಿರತಕ್ಕದ್ದು ಒಂದು ವರದಿಯ ಆಧಾರದ ಮೇಲೆ. ಆ ವರದಿಯ ಬಗ್ಗೆ ನಮಗೆ ಯಾವುದೇ ಮನ್ನಣೆ ಇಲ್ಲ, ಪರಿಶೀಲಿಸಿಲ್ಲ, ಅದು ನಮಗೆ ಲೆಕ್ಕಕ್ಕೂ ಇಲ್ಲ. ಆದರೂ ನಾವು ನಮ್ಮ ರಾಜ್ಯದ ನಿಲುವನ್ನು ಸ್ಪಷ್ಟಪಡಿಸಬೇಕೆಂಬುದಕ್ಕೋಸ್ಕರ ನಾವೆಲ್ಲ ಸೇರಿ ಒಂದು ನಿರ್ಣಯವನ್ನು ಮಾಡಿದ್ದೇವೆ. ಬಚಾವತ ಆವಾರ್ಡ್‌ನಲ್ಲಿ ನಾವು ನಡೆದುಕೊಂಡಿರುವುದು ಹೇಗೆ, ಆಂಧ್ರಪ್ರದೇಶ ಹೇಗೆ ನಡೆದುಕೊಂಡಿದೆ ಇದನ್ನು ದೇಶಕ್ಕೆ ತಿಳಿಸಬೇಕು, ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು ಮತ್ತು ಇದಕ್ಕೆ ಸಂಬಂಧಪಟ್ಟವರು ಯಾರಿದ್ದಾರೆ ಅವರಿಗೆ ತಿಳಿಸಬೇಕೆಂಬ ಕಾರಣ, ಬೆಳಗಿನಿಂದ ಎಲ್ಲ ಮುಖಂಡರು ಸೇರಿ ವಿಚಾರ ಮಾಡಿ, ನಮ್ಮ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಕೇಳಿ ತಯಾರಿಸಿರತಕ್ಕ ಸರ್ವಪಕ್ಷಗಳ ಸರ್ವಸಮ್ಮತದ ನಿರ್ಣಯವನ್ನು ನಾನು ತಮ್ಮ ಅನುಮತಿ ಪಡೆದು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ನಿರ್ಣಯ ಈ ರೀತಿ ಇದೆ.